ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2024 ಮಾಸ ಪತ್ರಿಕೆ

Akhila Karnataka Shikshaka Samachar | December 2024 | Monthly



## ಸಂಪಾದಕೀಯ

ಮಾನವನ ಜೀವನದ ಉನ್ನತಿಗೆ ದಾರಿಯನ್ನು ತೋರುವ ಮತ್ತು ಸಾವಿರಾರು ವರ್ಷಗಳ ನಂತರವು ಇಂದಿನ ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂಚಿಸಬಲ್ಲ ಯಾವುದಾದರೂ ಶ್ರೇಷ್ಠ ಗ್ರಂಥ ಇದೆಯೆಂದರೆ ಅದು "ಭಗವದ್ಗೀತೆ" ಯೇ ಆಗಿರುತ್ತದೆ. ಶ್ರೀ ಕೃಷ್ಣ ಮತ್ತು ಅರ್ಜುನರ ನಡುವಿನ ಸಂವಾದದ ಸೂಚಕವಾಗಿದ್ದ ಗೀತೆ ಭಾರತೀಯರ ಧರ್ಮ ಗ್ರಂಥ. ಗೀತಾ ಜಯಂತಿಯನ್ನು ಆಚರಿಸುತ್ತಿರುವ ನಾವುಗಳೆಲ್ಲ ಅದನ್ನು ಒಂದು ಬಾರಿ ಓದಬೇಕಲ್ಲವೆ. ಅಲ್ಲಿರುವ ಅಂಶಗಳತ್ತ ಗಮನ ನೀಡಿ ಜೀವನ ಸಾಗಿಸುವ ಪ್ರಯತ್ನ ಮಾಡಬೇಕಲ್ಲವೇ.

ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರತಿರೂಪವಾದ ಶ್ರೀಗುರುದತ್ತ ಜಯಂತಿಯನ್ನು ಸಂಭ್ರಮದಿಂದ ಆಚರಿಸುವ ನಾವುಗಳೆಲ್ಲ ದತ್ತಾತ್ರೇಯರ ತಾಯಿ ಸೊಸೆಯಂದಿರಿಗೆ ಹೇಳಿಕೊಟ್ಟ ಪಾಠ ನಮ್ಮ ಜೀವನಕ್ಕೆ ಪಾಠ, ನಮಗೆಲ್ಲ ಆದರ್ಶ. ಹಾಗೆ ಈ ತಿಂಗಳಲ್ಲಿ ಬರುವ ಮಾತೆ ಶಾರದಾದೇವಿಯ ಜಯಂತಿಯಂದು ಆ ತಾಯಿಯ ಶಕ್ತಿ ಮತ್ತು ತ್ಯಾಗವನ್ನು ರಾಮಕೃಷ್ಣ ಪರಮಹಂಸರ ಮತ್ತು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಜೀವನದ ದಾರಿಗಳಲ್ಲಿ ಕಾಣಬಹುದಾಗಿದೆ.

ಸ್ವಾತಂತ್ರದ ಹೋರಾಟದ ದಿನಗಳಲ್ಲಿ ಸ್ವದೇಶಿ ಜೀವನ ಶೈಲಿ, ರಾಷ್ಟ್ರಭಕ್ತಿಯ ಸಂಕೇತವಾಗಿತ್ತು. ಸ್ವಾಭಿಮಾನದ ಸ್ವದೇಶಿ ಹೋರಾಟ, ಇಂಗ್ಲೀಷರನ್ನು ಭಾರತದಿಂದ ಹೊರಹಾಕುವಲ್ಲಿ ಯಶಸ್ವಿಯಾದ ಅಂಶಗಳಲ್ಲಿ ಪ್ರಮುಖವಾದದ್ದು. ಅಂದು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಒಂದು ಭಾರತವನ್ನು 300 ವರ್ಷ ಆಳ್ವಕೆ ಮಾಡಲು ದಾರಿಮಾಡಿಕೊಟ್ಟಿತ್ತು ಆದರೆ ಇಂದು ಸಾವಿರಾರು ವಿದೇಶಿ ಕಂಪನಿಗಳು ಭಾರತದಲ್ಲಿಯ ಅಭಿವೃದ್ಧಿಯ ಮುಖವಾಡದಲ್ಲಿ ದೇಶವನ್ನು ಕೊಳ್ಳೆಹೊಡೆಯುತ್ತಿವೆ. ಇತ್ತೀಚಿನ ವರ್ಷಗಳಲ್ಲಿ 'ಸ್ವದೇಶಿ ಜೀವನ ಶೈಲಿಯು ಜಾಗೃತಿ' ಮತ್ತೆ 'ಮೇಕಿನ್ ಇಂಡಿಯಾ'ದಂತಹ ಯೋಜನೆಗಳು ಸ್ವಾಭಿಮಾನದ ಸಂಕೇತವಾಗಿಯೂ ರೂಪುಗೊಂಡಿವೆ. ಸರ್ಕಾರ ಎಷ್ಟು ಪ್ರಯತ್ನ ಮಾಡಿದರು ಅವುಗಳು ಯಶಸ್ವಿಯಾಗಬೇಕೆಂದರೆ ನಾವು ಮನಸ್ಸು ಮಾಡಬೇಕು. ನಾವೆಲ್ಲ ಸ್ವದೇಶಿ ವಸ್ತುಗಳನ್ನು ಬಳಸಿದರೆ ಮಾತ್ರ ದೇಶದ ಪ್ರಗತಿ ಸಾಧ್ಯ. ಸ್ವದೇಶ ದಿನ ಆಚರಿಸುತ್ತಿರುವ ಈ ಸಂದರ್ಭದಲ್ಲಿ ನಾವೆಲ್ಲ ಪ್ರತಿಜ್ಞೆಗೈಯೋಣ. ನಮಗೆಲ್ಲ ಎಷ್ಟು ಸಾಧ್ಯವೋ ಅಷ್ಟು ಸ್ವದೇಶಿ ಜೀವನ ಶೈಲಿಯನ್ನು ರೂಢಿಸಿಕೊಳ್ಳೋಣ.

ದೇಶಕ್ಕಾಗಿ ಜೀವನ ಸಾಮಾಜಿಕ ಕಳಕಳ ರೂಢಿಸಿಕೊಳ್ಳುವುದರ ಜೊತೆಯಲ್ಲಿ ನಾವೆಲ್ಲ ಆಯ್ಕೆ ಮಾಡಿಕೊಂಡಿರುವ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ನಮಗೆಲ್ಲ ಉತ್ಸಾಹ ತುಂಬಿರುವ ನವೆಂಬರ್ 23ಮತ್ತು 24-2024. ಪ್ರಾಂತ ಅಭ್ಯಾಸವರ್ಗವು. ಹಿರಿಯ ಕಿರಿಯರ ಸಂಗಮ, ಭಾವನೆಗಳ ಸಮ್ಮಿಲನ, ಶೈಕ್ಷಣಿಕ ಕ್ಷೇತ್ರದಿಂದ ದೇಶ ಕಟ್ಟುವ ಪ್ರಯತ್ನ ಮತ್ತು ಮುಂದಿನ ದಿನಗಳಲ್ಲಿ 'ಶಿಕ್ಷಕರು' ದೇಶ ಕಟ್ಟುವ ಶೈಕ್ಷಣಿಕ ಸೈನಿಕನಾಗಿ ಮುನ್ನುಗ್ಗುವ ಉತ್ಸಾಹ ನೀಡುವಲ್ಲಿ ಪ್ರಾಂತ ಅಭ್ಯಾಸವರ್ಗ ಯಶಸ್ವಿಯಾಗಿದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಶಿಕ್ಷಕರಿಗೆ ಭಗವದ್ಗೀತೆಯ ಸಂದೇಶ – ಹೆಚ್. ನಾಗಭೂಷಣ್ ರಾವ್ 3
- ಶ್ರೀಮಾತೆ ಶಾರದಾದೇವಿ – ಡಾ|| ಲೋಕೇಶ್ 5
- ಪೂರ್ವಸೂರಿಗಳೊಡನೆ ಅಂಕಣದಲ್ಲಿ 2 ಅ. ಪು. ನಾರಾಯಣಪ್ಪ – ನಂ. ನಾಗಲಕ್ಷ್ಮಿ 6
- ಮನೆಯಂಗಳದಲ್ಲಿ ಆತ್ಮನಿರ್ಭರತೆ – ಮಹಾದೇವಯ್ಯ ಕರದಳ್ಳಿ 7
- ಪ್ರಾಂತ ಅಭ್ಯಾಸ ವರ್ಗದ ವರದಿ – ವಿದ್ವಾನ್ ನಾರಾಯಣ ಭಟ್ಟ 9
- ಪ್ರಾಂತ ಅಭ್ಯಾಸ ವರ್ಗದ ವರದಿ–ಚಿತ್ರನೋಟ 11
- ಚಿತ್ರನೋಟ 12

# ಎರಡು ದಿನಗಳ ಕಾಲ ನಡೆದ ಪ್ರಾಂತ ಅಭ್ಯಾಸ ವರ್ಗದ ಚಿತ್ರನೋಟ

























MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-12-2024 Date of Posting 20th or 21st of every month Posted at Periodical Rate

# ಎರಡು ದಿನಗಳ ಕಾಲ ನಡೆದ ಪ್ರಾಂತ ಅಭ್ಯಾಸ ವರ್ಗದ ಚಿತ್ರನೋಟ












IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com